Fast undertaken by agricultural labourers working in Devikarani Estate.

ಶ್ರೀ ಎಂ ವಿ. ರಾಜಶೇಖರನ್.—ಕೃಷಿ ಕಾರ್ಮಿಕರ ವಿಚಾರದಲ್ಲಿ ನಮ್ಮ ಸರ್ಕಾರದವರು ಬಹಳ ವಾಗಿ ಮಾತನಾಡುತ್ತಾರೆ. ಈ ಸರ್ಕಾರ ಮತ್ತು ಕೇಂದ್ರ ಸರ್ಕಾರ ಕೃಷಿ ಕಾರ್ಮಿಕರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿದೆ. ದೇವಿಕಾರಾಣಿ ಎಸ್ಟೇಟಿನಲ್ಲಿ ಕೆಲಸ ಮಾಡತಕ್ಕ ಸುಮಾರು ೧೫೦ ಜನ ಹರಿಜನ ಕೃಷಿ ಕಾರ್ಮಿಕರು ಕಳೆದ ಮೂರು ತಿಂಗಳಿಂದ ವಿಧಾನಸೌಧದ ಮುಂದೆ ಉಪವಾಸ ಕೂತಿದ್ದಾರೆ. ಹಿಂದೆ ಇದ್ದಂಥ ಮುಖ್ಯ ಮಂತ್ರಿಗಳು ೧೫೦ ಜನ ಕೃಷಿ ಕಾರ್ಮಿಕರ ವಿಚಾರವನ್ನು ಪರಿಶೀಲನೆ ಮಾಡು ತ್ತೇನೆಂದು ಭರವಸೆ ಕೊಟ್ಟಿದ್ದರು; ಪರಿಹಾರ ಮಾಡುತ್ತೇವೆಂದು ಕೂಡ ಭರವಸೆ ಕೊಟ್ಟಿದ್ದರು. ಅಂದಿನ ಕಾರ್ಮಿಕ ಮಂತ್ರಿಗಳು ಕೂಡ ಆದಷ್ಟು ಶೀಘ್ರವಾಗಿ ಪರಿಹಾರ ಮಾಡುತ್ತೇನೆಂಡು ಭರವಸೆ ಕೊಟ್ಟಿದ್ದರೂ ಆಗಲಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆ ಜನತೆಗೆ ಇಂಟರ್‌ವ್ಯೂ ಕೊಡಲಿಲ್ಲ ಅಂತ ಹೇಳುತ್ತಿದ್ದಾರೆ. ಕೃಷಿ ಕಾರ್ಮಿಕರಿಗೆ ಹೆಚ್ಚಿನ ಆದ್ಯತೆಯನ್ನು ಈ ಸರ್ಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತಿನದಿವಸ ಆ ಜನ ಊಟವಿಲ್ಲದೆ ಸಾಯುತ್ತಿದ್ದಾರೆ, ಎಷ್ಟು ದಿನದಲ್ಲಿ ಅವರಿಗೆ ಪರಿಹಾರ ಕೊಡುತ್ತೀರಾ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಮುಖ್ಯಮಂತ್ರಿ ಗಳಾಗಲೀ, ಸಂಬಂಧಪಟ್ಟ ಮಂತ್ರಿಗಳಾಗಲೀ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

K.S.R.T.C. bus accident at Nelamangala.

†ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಕಕ್ಕಿಲಾಯರವರು ಬಸ್ಸಿನ ದುರಂತವನ್ನು ಪ್ರಸ್ತಾಪ ಮಾಡಿದರು. ನಾವು ಕೆಲವರು ನೋಟೀಸ್ ಕೊಡುವವರಿದ್ದೆವು. ಅಷ್ಟರಲ್ಲಿ ಮಾನ್ಯ ಸಾರಿಗೆ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ನಾವು ಇನ್ನು ಅನೇಕ ಪ್ರಶ್ನೆಗಳನ್ನು ಈ ವಿಷಯದಲ್ಲಿ ಕೇಳಬೇಕಾಗಿತ್ತು; ನಮಗೆ ಇನ್ನೂ ಕೆಲವು ಮಾಹಿತಿಗಳು ಬೇಕಾಗಿದೆ.

ಅಧ್ಯಕ್ಷರೆ, ಈ ವಿಷಯ ಇವೊತ್ತಿನ ಅಜೆಂಡಾದಲ್ಲಿ ಇರಲಿಲ್ಲ. ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರು ಪರ್ತಾಗಿ ಹೇಳಿದರು. ಆದರ ಮೇಲೆ ನಾವು ಇನ್ನೂ ಪ್ರಸ್ತಾಪ ಮಾಡಬೇಕಾಗಿತ್ತು. ಅಷ್ಟರಲ್ಲಿ ಮಾನ್ಯ ಸದಸ್ಯರಾದ ರಾಜಶೇಖರನ್ ಅವರು ದೇವಿಕಾರಾಣಿ ವಿಚಾರಕ್ಕೆ ಹೋದರು. ಮಾನ್ಯ ಸದಸ್ಯರು ಹೇಳಿದ್ದು ತಪ್ಪು ಏಂದು ನಾನು ಹೇಳುವುದಿಲ್ಲ. ನಾನು ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರು ಹೇಳಿದ್ದರ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕಾಗಿತ್ತು. ಅದು ಈಗ ತಪ್ಪಿ ಹೋಗಿದೆ. ಪುನಃ ನಾಳೆ ಇದಕ್ಕೆ ಹೇಳಿಕೆ ಕೊಡುತ್ತಾರೆಯೇ ?

ಅಧ್ಯಕ್ಷರು.—ಆ ರೀತಿ ಮಾಡಲಿಕ್ಕೆ ಸಾಧ್ಯವೇ ಮಾನ್ಯ ಸದಸ್ಯರಾದ ತಾವೇ ಹೇಳಬೇಕು.

ಶ್ರೀ ಮಳ್ಳೂರು ಆನಂದರಾವ್.—ಈಗ ಆಕ್ಸಿಡೆಂಟ್ ಆಗಿ ಜನ ಸತ್ತಿದ್ದಾರೆ. ಇದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಎರಡು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರ ಹಕ್ಕನ್ನು ನಾನು ಮೊಟಕು ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೆ, ಇದು ಅಜೆಂಡಾದಲ್ಲಿ ಇರಲಿಲ್ಲ ಆದರೂ ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು, ಅದರ ಬಗ್ಗೆ ನಾವು ಇನ್ನು ಕೆಲವು ವಿಚಾರಗಳನ್ನು ಕೇಳಬೇಕಾಗಿದೆ. ತಾವು ದಯಮಾಡಿ ಕುಳಿತುಕೊಳ್ಳಿ ಅಂದರೆ ಹೇಗೆ ?

ಅಧ್ಯಕ್ಷರು.—ಅಜೆಂಡಾದಲ್ಲಿ ಇಲ್ಲದಿದ್ದರೆ ಪರ್ಮಿಷನ್ ಕೊಡಿ ಅಂತ ಕೇಳುವವರು ತಾವೆ, ಈಗ ಈ ರೀತಿ ಹೇಳುವವರು ತಾವೆ. ಪ್ರಾಣಾಪಾಯವಾಗಿರುವುದರಿಂದ ಮಹತ್ವವಾದ ವಿಚಾರ, ಆದುದರಿಂದ ಇದಕ್ಕೆ ಅವಕಾಶ ಕೊಟ್ಟರೆ ನಮಗೂ ಆಗುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೆ, ಇದರ ಬಗ್ಗೆ ತಕರಾರು ಬೇಡವೆ ! ನಾವು ಇನ್ನೂ ಮಾತನಾಡಬೇಕಾಗಿದೆ.

---

† Indicates that remarks or speeches have not been revised by the member concerned.